ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ  ದರ್ಜೆಯ ನ್ಯಾಯಿಕ  ದಂಡಾಧಿಕಾರಿಯವರ ನ್ಯಾಯಾಲಯ
ಹೊನ್ನಾವರ.

ಸಿಸಿ ನಂಃ 2555/2022
ಪಿ ಡಬ್ಲುಃ 2
ಸಿ ಡಬ್ಲುಃ 4

| | |
|---|---|
| ಸಾಕ್ಷಿದಾರರ ಹೆಸರು | ಮಾಸ್ತಿ ಮುಕ್ರಿ |
| ತಂದೆಯ ಹೆಸರು | ದುರ್ಗು  ಮುಕ್ರಿ |
| ವಯಸ್ಸು | 55 |
| ಉದ್ಯೋಗ | ಕೂಲಿ |
| ವಾಸ್ತವ್ಯ | ಕರ್ಕಿ, ತಾಃ ಹೊನ್ನಾವರ |

ಸಾಕ್ಷಿಯನ್ನು ದಿನಾಂಕಃ 06-12-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಆರೋಪಿತರು ನನ್ನ ಅಣ್ಣನ ಮಕ್ಕಳು. ಚಾ.ಸಾ. 1 ನನ್ನ ಹೆಂಡತಿ. ನನಗೆ ಕರ್ಕಿ ಗ್ರಾಮದ ಸ.ನಂಃ 631/4 ರಲ್ಲಿ 3 ಗುಂಟೆ ಜಾಗ ಇದೆ. ದಿನಾಂಕಃ 23.12.2021 ರಂದು ಬೆಳಿಗ್ಗೆ 10.30 ರಿಂದ 1.30 ರ ವರೆಗೆ ನಮಗೆ ಸೇರಿದ ಜಾಗದಲ್ಲಿ ಸರ್ವೆಯನ್ನು ಜರುಗಿಸಿದ್ದು ಆಗ ನಾನೇ ಜಾಗವನ್ನು ತೋರಿಸಿರುತ್ತೇನೆ.  ಅವರು ಸರ್ವೆ ಮಾಡಿ 4 ಕಲ್ಲುಗಳನ್ನು ಹುಗಿದಿರುತ್ತಾರೆ. ಮಧ್ಯಾಹ್ನ 2-30 ರ ಸಮಯಕ್ಕೆ ಆರೋಪಿತರು ಸದ್ರಿ ಗಡಿ ಕಲ್ಲುಗಳನ್ನು ಕಿತ್ತು ಹಾಕಿರುತ್ತಾರೆ. ಆಗ ನಾನು ಮತ್ತು ಚಾಸಾ-1 ರವರು  ಆ ಬಗ್ಗೆ ಆರೋಪಿತರನ್ನು ವಿಚಾರಿಸಿರುತ್ತೇವೆ.  ಆಗ ಆರೋಪಿತರು ನನಗೆ ಮತ್ತು ಚಾಸಾ 1 ರವರಿಗೆ ರಂಡೆ ಮುಂಡೆ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ಆರೋಪಿತರಿಬ್ಬರು ಸೇರಿ ಚಾಸಾ 1 ರವರನ್ನು ದೂಡಾಡಿರುತ್ತಾರೆ. ನಂತರ ಆರೋಪಿತರು ಇನ್ನೊಮ್ಮೆ ಜಾಗದ ಸುದ್ದಿಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ.  ನಂತರ ಈ ಕುರಿತು ಠಾಣೆಗೆ ಬಂದು ಚಾಸಾ 1 ರವರು ದೂರನ್ನು ನೀಡಿರುತ್ತಾರೆ.  ನಂತರ ನಾನು ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ನಡೆದ ಘಟನೆಯ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ವಿ.ಆರ್.ಎನ್.    ವಕೀಲರಿಂದಃ**

ಚಾಸಾ 1 ರವರು ಎಷ್ಟು ದೂರುಗಳನ್ನು ಇದುವರೆಗೆ ದಾಖಲಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಆ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಗಲಾಟೆ ನಡೆದಿದ್ದು ಸ.ನಂಃ 631/4 ರಲ್ಲಿ. ಅದು ಮೊದಲು 9 ಗುಂಟೆ ಜಾಗವಾಗಿತ್ತು.

15 ವರ್ಷಗಳ ಹಿಂದೆ ಸದ್ರಿ ಜಾಗವನ್ನು ವಿಭಾಗ ಮಾಡಿಕೊಡಿದ್ದು ಅದರಲ್ಲಿ ನನಗೆ ನಾಲ್ಕುವರೆ ಗುಂಟೆ, ಆರೋಪಿತರ ತಂದೆಗೆ ನಾಲ್ಕುವರೆ ಗುಂಟೆ ಜಾಗ ಬಂದಿತ್ತು. ಈಗ ನಾವು 3 ಗುಂಟೆಗೆ ಸಂಬಂದಿಸಿದಂತೆ ನಕಾಶೆ ಮಾಡಿಕೊಂಡಿರುತ್ತೇವೆ. ಒಂದೂವರೆ ಗುಂಟೆ ಜಾಗವನ್ನು ನಮ್ಮ ಸಂಬಂಧಿಕರಿಗೆ ಕೊಟ್ಟಿರುತ್ತೇವೆ. ಆ ರೀತಿ ಕೊಡುವಾಗ ನಕಾಶೆ ಮಾಡಿಸಿ ಕೊಟ್ಟಿರುತ್ತೇವೆ. 15 ವರ್ಷಗಳ ಹಿಂದೆ ಸರ್ವೆಯಾಗಿತ್ತು ಮತ್ತು ನಕಾಶೆ ಕೂಡ ಆಗಿತ್ತು. ಅದನ್ನು ನಾನು ನೋಡಿರುತ್ತೇನೆ. ನನಗೆ ಸೇರಿದ ಜಾಗದ ದಕ್ಷಿಣ ದಿಕ್ಕಿಗೆ ಆರೋಪಿತರ ಮನೆ ಬರುತ್ತದೆ. ಸದ್ರಿ ದಿನ ಆರೋಪಿತರ ಮನೆಯ ಎದುರಿಗೆ ಸರ್ವೆ ಕಲ್ಲುಗಳನ್ನು ಹುಗಿದಿರುತ್ತಾರೆ. ಆರೋಪಿತರ ಮನೆಯ ತುಳಸೀ ಕಟ್ಟೆಯ ಎದುರು ಒಂದು ಅಡಿ ಅಂತರದಲ್ಲಿ ಕಲ್ಲುಗಳನ್ನು ಹುಗಿದಿರುತ್ತಾರೆ. ಆರೋಪಿತರ ಮನೆಯ ಕಡೆ ಒಟ್ಟು 4 ಕಲ್ಲುಗಳನ್ನು ಹುಗಿದಿದ್ದರು. ಕಲ್ಲನ್ನು ಹುಗಿಯುತ್ತಿರುವಾಗ ಆರೋಪಿತರು ತಕರಾರು ಮಾಡಿರುವುದಿಲ್ಲ. 1.30 ರವರೆಗೆ ಸರ್ವೆಯರ್ ಇದ್ದರು. ಸ್ಥಳದಲ್ಲಿ ಬೇಲಿ ಹಾಕಲು ತಯಾರಿ ಮಾಡಿಕೂಂಡಿದ್ದರು. ಇಬ್ಬರು ಆರೋಪಿತರು ಸ್ಥಳಕ್ಕೆ ಒಟ್ಟಿಗೆ ಬಂದಿರುತ್ತಾರೆ. ಆರೋಪಿತರ ಮನೆಯ ಎದುರಿಗೆ ಇದ್ದಂತಹ ಒಂದು ಕಲ್ಲನ್ನು ಕಿತ್ತು ಹಾಕಿರುತ್ತಾರೆ. ಆರೋಪಿತರು ಸದ್ರಿ ಕಲ್ಲನ್ನು ಕಿತ್ತು ಎಸೆದಿರುತ್ತಾರೆ. ಆರೋಪಿತರು ಮತ್ತು ಚಾಸಾ 1 ರವರ ಮದ್ಯೆ ಸುಮಾರು 20 ನಿಮಿಷ ಮಾತುಕತೆಯಾಗಿರುತ್ತದೆ. ಮೊದಲು ಚಾಸಾ 1 ರವರು ಮಾತನಾಡಿರುತ್ತಾರೆ. ಆರೋಪಿತರು ನನಗೇ ಮತ್ತು ಚಾಸಾ 1 ರವರಿಗೆ ಬೈದಿರುತ್ತಾರೆ. ಅಕ್ಕಪಕ್ಕದ ಸುಮಾರು 12 ಜನರು ಘಟನೆಯನ್ನು ನೋಡಿರುತ್ತಾರೆ. ಆರೋಪಿತರು ಇಬ್ಬರೂ ಸೇರಿ ಚಾಸಾ 1 ರವರ ಜುಟ್ಟನ್ನು ಹಿಡಿದಿರುತ್ತಾರೆ. ಚಾಸಾ 1 ರವರ ಎಷ್ಟು ಬಳೆಗಳು ಒಡೆದು ಹೋಗಿದ್ದವು ಎಂದರೆ ಸಾಕ್ಷಿ ಒಂದರೆಡು ಒಡೆದು ಹೋಗಿದ್ದವು ಎಂದು ನುಡಿಯತ್ತಾರೆ. ಚಾಸಾ 1 ರವರ ಬಲಗೈಗೆ ಸ್ವಲ್ಪ ರಕ್ತಗಾಯವಾಗಿತ್ತು. ಅಕ್ಕಪಕ್ಕದ ಜನರು ಬಂದು ಗಲಾಟೆ ತಪ್ಪಿಸಿರುವುದಿಲ್ಲ. ಆರೋಪಿತರು ನನ್ನನ್ನು ದೂಡಿ ಹಾಕಿರುವುದಿಲ್ಲ. ಆ ಸಮಯದಲ್ಲಿ ಚಾಸಾ 1 ರವರು ಸೀರೆಯನ್ನು ಧರಿಸಿದ್ದರು ಅದಕ್ಕೆ ಮಣ್ಣಿನ ಕಲೆಯಾಗಿತ್ತು. ಇಷ್ಟೆಲ್ಲಾ ಆಗುವಷ್ಟರಲ್ಲಿ ಮಧಾಹ್ನ 2.30 ಗಂಟೆ ಆಗಿತ್ತು. ನಾವು ಸಂಜೆಯವರೆಗೆ ಅದೇ ಜಾಗದಲ್ಲಿ ಇದ್ದು ಸುಧಾರಿಸಿಕೊಂಡು ನಂತರ ದೂರು ಕೊಟ್ಟಿರುತ್ತೇವೆ. ನಾವು ನೇರವಾಗಿ ಪೋಲಿಸ್ ಠಾಣೆಗೆ ಹೋಗಿರುತ್ತೇವೆ.

ದೂರನ್ನು ಹೊನ್ನಾವರದಲ್ಲಿ ಇರುವ ಟೈಪಿಂಗ್ ಸೆಂಟರ್ ನಲ್ಲಿ ಬರೆಸಿರುತ್ತೆವೆ ಅದೇ ದಿನ ರಾತ್ರಿ 9.00 ರ ಸಮಯಕ್ಕೆ ಆಸ್ಪತ್ರೆಗೆ ಹೋಗಿರುತ್ತೇವೆ. ಮಾರನೇ ದಿನ ಪೋಲೀಸರು ಪಂಚನಾಮೆಗೆ ಬಂದಿರುತ್ತಾರೆ. ಆಗ ಪೋಲಿಸರಿಗೆ ಕಲ್ಲುಗಳನ್ನು ತೋರಿಸಿರುತ್ತೇವೆ. ಪೋಲೀಸರು ಸದ್ರಿ ಎರಡು ಕಲ್ಲುಗಳನ್ನು ವಶಕ್ಕೆ ಪಡೆದು ತೆಗೆದುಕೊಂಡು ಹೋಗಿರುತ್ತಾರೆ. ಸದ್ರಿ ದಿನ ನಾನು ಹೇಳಿದಂತೆ ಯಾವುದೇ ಘಟನೆ ನಡೆದಿದ್ದು ಇಲ್ಲ ಮತ್ತು ಆರೋಪಿತರು ಕಲ್ಲುಗಳನ್ನು ತುಂಡು ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ಜಾಗವನ್ನು ನಾವು ಅತಿಕ್ರಮಣ ಮಾಡುತ್ತಿದ್ದು ಅವರಿಗೆ ಹೆದರಿಸುವ ಸಲುವಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ ಇದೆ/-

ಪ್ರ ದ ನ್ಯಾದಂ ಹೊನ್ನಾವರ.